In the Circumstances explained in the preamble above, Government are pleased to accord sanction under Section 2 of Forest (Conservation) Act,1980 for diversion of 12.19 ha. of forest land in Hospet, Tornagallu RF and Jambunathanahalli, Kolagallu unclassified forests of Hospet and Bellary Ranges for widening of Hospet(BeUary) to Karnataka/Andhra Pradesh Border Section of NH-63(KM 283,100 to 375.740) in favour of the General Manager(Tech) & Project Director, NHAI, Dharwad for a period of 20(Twenty)years subject to the following conditions.

The details of the forest land are as under:-

Sl. No.	Name of the District	Name of the Taluk/Range	Name of the RF/Unclassified Land	Sy.No	Extent (in Ha.)
1	Bellary	Bellary	Totanagallu RF	519	3:27
2		Bellary	Kolagallu Unclassified Forest	725	0.57

Sl. No.	Name of the District	Taluk/Range	Name of the RF/Unclassified Land	Sy.No	Extent (in Ha.)
3	Bellary	Hospet	Hospet R.F.	Total	3.84
4		Hospet	Jambunathanahalli Unclassified Forest	192	4.23
				115	4.12
				Total	8.34
				Grand Total	12.19 Ha.

1. The legal status of the forest land shall remain unchanged.
2. The demarcation of the forest area shall be carried out by erecting cement concrete pillars duly numbered at an interval of 20 meters at the cost of user agency.
3. The total forest area utilized for the project shall not exceed .12.19 ha.
4. Any other condition that the Additional Principal Chief Conservator of Forests(Central), Regional office, Bengaluru may impose from time to time for protection, improvement of flora and fauna in the forest area and public. convenience, shall also be applicable.
5. The Compensatory Afforestation (CA) shall be raised over 25.0 ha. of degraded forest land at Sunkadakallu RF of Kudligi Range of Bellary Forest Division at the cost of user agency. The Department of Forest shall obtain prior permission of Central Government for any change of compensatory afforestation site.
6. Handing and taking over of land and commencement of work in the land shall be done within a period of two years from the date Stage- II approval.
7. The DGPS readings of the 25.0 ha. of degraded forest land identified for compensatory afforestation as well as the forest land diverted shall be communicated to Additional Principal Chief Conservator ofForests(Central), Ministry of Environment and Forests, Government of India, Regional Office, Bengaluru within 30 days of transfer oft he forest land.
8. The lessee shall pay lease rent as fixed by the Government from time to time.
9. The lease tenure is for a period of 20 (Twenty) years.
10. The leased out area should be used for the purpose for which it is granted. In case the land is not used for the stipulated purpose within one year or when it is no longer needed for the stipulated purpose, the area should be resumed to the Forest Department under Section 82 of Karnataka Forest Act, 1963. The concerned Deputy Conservator of Forests is authorized to take necessary action in this regard.
11. No residential building shall be permitted in the proposed area.
12. The Kamataka Forest Act 1963 and Rules 1969 and other relevant Acts and Rules will be applicable for any violation.
13. Avenue Plantation shall be taken up along the road on either side (200 plants per km.) at the project cost. The plantation shall be maintained at the project cost for 5 years.
14. The User Agency shall ensure that there shall be no damage to the available fauna and flora.
15. No crushing/breaking of stones shall be allowed inside forest area. Readymade material shall be used for improvement of such road.
16. No labour camp shall be established on the forest lands.
17. No work shall be allowed after sunset and before sunrise.
18. Any damage to forest area due to such improvement works shall be compensated by the User Agency. The extent of damage shall be assessed by the concerned Deputy Conservator of Forests.
19. The User Agency shall not sub-lease, mortgage and hypothecate the forest area.
20. The user Agency shall abide by all the conditions imposed upon by the Government of India, the Government of Karnataka and the Principal Chief Conservator of Forests (Head of Forest Force).

By Order and in the name of the Governor of Karnataka

L.SHARADA

Under Secretary to Government,

Forests, Ecology and Environment Department.

PR-81

SC-100

ಕಂದಾಯ ಸಚಿವಾಲಯ

ವಿಷಯ: ಯಾದಗಿರಿ ಜಿಲ್ಲೆ, ಯಾದಗಿರಿ ವಿಧಾನಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಕಂಇ 67 ಮುಸರ 2007, ದಿನಾಂಕ: 10-10-2008.

2. ಸರ್ಕಾರದ ಆದೇಶ ಸಂಖ್ಯೆ: ಕಂಇ 61 ಮುಆಬಿ 2013, ದಿನಾಂಕ: 17-01-2014.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ: 10-10-2008ರಲ್ಲಿ ಆರಾಧನಾ ಯೋಜನೆಯ ಅನುಷ್ಠಾನಕ್ಕಾಗಿ ವಿಧಾನಸಭಾ ಕ್ಷೇತ್ರವಾರು ಆರಾಧನಾ ಸಮಿತಿಗಳನ್ನು ರಚಿಸಲು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ: 17-01-2014ರಲ್ಲಿ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಆಯಾಯ ವಿಧಾನಸಭಾ ಕ್ಷೇತ್ರದ ವಿಧಾನಸಭಾ ಸದಸ್ಯರನ್ನು ಅಧ್ಯಕ್ಷರನ್ನಾಗಿ ಹಾಗೂ ಅಧಿಕಾರಿಗಳನ್ನೊಳಗೊಂಡ ಆರಾಧನಾ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲಾಗಿದೆ. ಅದರಂತೆ ಯಾದಗಿರಿ ಜಿಲ್ಲೆ, ಯಾದಗಿರಿ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ನಾಲ್ಕು ಜನ ಅಧಿಕಾರೇತರ ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಂಇ 226 ಮುಸರ 2013, ಬೆಂಗಳೂರು, ದಿನಾಂಕ: 16ನೇ ಜನವರಿ, 2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಯಾದಗಿರಿ ಜಿಲ್ಲೆ, ಯಾದಗಿರಿ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡ ನಾಲ್ಕು ಜನ ಅಧಿಕಾರೇತರ ಸದಸ್ಯರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಲಾಗಿದೆ.

1	ಶ್ರೀ ಮಲ್ಲಿಕಾರ್ಜುನ ತಂದೆ ಭೀಮರಾಯ, ಸಾ: ಹೈಯ್ಯಾಳ (ಕೆ) ಶಹಪೂರ ತಾಲ್ಲೂಕು (**ಸಾಮಾನ್ಯ**)	ಸದಸ್ಯರು
2	ಶ್ರೀಮತಿ ವಿಜಯಲಕ್ಷ್ಮಿ ಗಂಡ ನರಸಯ್ಯ ಮಾಸ್ತರ, ವಾರ್ಡ್ ನಂ.6, ಕಲಾಲವಾಡಿ, ಯಾದಗಿರಿ (**ಮಹಿಳೆ**)	ಸದಸ್ಯರು
3	ಶ್ರೀ ನಿಂಗಪ್ಪ ತಂದೆ ಸಾಬಣ್ಣ ಪೂಜಾರಿ, ಸಾ: ಮರಮಕಲ್, ಬಲಕಲ್ ಪೋಸ್ಟ್, ಶಹಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ (**ಪರಿಶಿಷ್ಟ ಜಾತಿ**)	ಸದಸ್ಯರು
4	ಶ್ರೀ ಹೊನ್ನಯ್ಯ ತಂದೆ ಮಾರ್ಥಂಡಪ್ಪ, ಸಾ॥ ಕೊಳ್ಳೂರ್ ಎಂ, ಶಹಪೂರ ತಾಲ್ಲೂಕು (**ಪರಿಶಿಷ್ಟ ಪಂಗಡ**)	ಸದಸ್ಯರು

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಟಿ.ಜಯರಾಮೇಗೌಡ,

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ. (ಮುಜರಾಯಿ)

P.R. 122

S.C. 25

ಕಂದಾಯ ಸಚಿವಾಲಯ

ವಿಷಯ: ಬಳ್ಳಾರಿ ಜಿಲ್ಲೆ, ಸಿರಗುಪ್ಪ ವಿಧಾನಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಕಂಇ 67 ಮುಸರ 2007, ದಿನಾಂಕ: 10-10-2008.

2. ಸರ್ಕಾರದ ಆದೇಶ ಸಂಖ್ಯೆ: ಕಂಇ 61 ಮುಆಬಿ 2013, ದಿನಾಂಕ: 17-01-2014.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ: 10-10-2008ರಲ್ಲಿ ಆರಾಧನಾ ಯೋಜನೆಯ ಅನುಷ್ಠಾನಕ್ಕಾಗಿ ವಿಧಾನಸಭಾ ಕ್ಷೇತ್ರವಾರು ಆರಾಧನಾ ಸಮಿತಿಗಳನ್ನು ರಚಿಸಲು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ: 17-01-2014ರಲ್ಲಿ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಆಯಾಯ ವಿಧಾನಸಭಾ ಕ್ಷೇತ್ರದ ವಿಧಾನಸಭಾ ಸದಸ್ಯರನ್ನು ಅಧ್ಯಕ್ಷರನ್ನಾಗಿ ಹಾಗೂ ಅಧಿಕಾರಿಗಳನ್ನೊಳಗೊಂಡ ಆರಾಧನಾ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲಾಗಿದೆ. ಅದರಂತೆ ಬಳ್ಳಾರಿ ಜಿಲ್ಲೆ, ಸಿರಗುಪ್ಪ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ನಾಲ್ಕು ಜನ ಅಧಿಕಾರೇತರ ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಂಇ 60 ಮುಸರ 2013, ಬೆಂಗಳೂರು, ದಿನಾಂಕ: 17ನೇ ಜನವರಿ, 2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆ, ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡ ನಾಲ್ಕು ಜನ ಅಧಿಕಾರೇತರ ಸದಸ್ಯರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಲಾಗಿದೆ.

1	ಶ್ರೀ ಬಲಕುಂದಿ ಗುರುರಾಜ ತಂದೆ ತಿಪ್ಪಣ್ಣ ಆಚಾರ್, 12ನೇ ವಾರ್ಡ್, ಸಿರುಗುಪ್ಪ (**ಸಾಮಾನ್ಯ**)	ಸದಸ್ಯರು
2	ಶ್ರೀಮತಿ ಲಕ್ಷ್ಮೀದೇವಿ ಗಂಡ ಹನುಮಂತಪ್ಪ, 24ನೇ ವಾರ್ಡ್, ಸಿರುಗುಪ್ಪ (**ಮಹಿಳೆ**)	ಸದಸ್ಯರು
3	ಶ್ರೀ ಶೇಖಪ್ಪ ಡಿ.ತಾಯಿ ಸಿದ್ದಮ್ಮ 25ನೇ ವಾರ್ಡ್ ಸಿರುಗುಪ್ಪ (**ಪರಿಶಿಷ್ಟ ಜಾತಿ**)	ಸದಸ್ಯರು
4	ಶ್ರೀ ರಾಯಪ್ಪ ತಂದೆ ಸಾದು ಈರಣ್ಣ, ಅಕ್ಕತಂಗಿಯರ ಹಾಳ್, ಸಿರುಗುಪ್ಪ ತಾಲ್ಲೂಕು (**ಪರಿಶಿಷ್ಟ ಪಂಗಡ**)	ಸದಸ್ಯರು

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಟಿ.ಜಯರಾಮೇಗೌಡ,

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ. (ಮುಜರಾಯಿ)

P.R. 123

S.C. 25

ಕಂದಾಯ ಸಚಿವಾಲಯ

ವಿಷಯ: ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಕಂಇ 67 ಮುಸರ 2007, ದಿನಾಂಕ: 10-10-2008.

2. ಸರ್ಕಾರದ ಆದೇಶ ಸಂಖ್ಯೆ: ಕಂಇ 61 ಮುಆಬಿ 2013, ದಿನಾಂಕ: 17-01-2014.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ: 10-10-2008ರಲ್ಲಿ ಆರಾಧನಾ ಯೋಜನೆಯ ಅನುಷ್ಠಾನಕ್ಕಾಗಿ ವಿಧಾನಸಭಾ ಕ್ಷೇತ್ರವಾರು ಆರಾಧನಾ ಸಮಿತಿಗಳನ್ನು ರಚಿಸಲು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ: 17-01-2014ರಲ್ಲಿ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಆಯಾಯ ವಿಧಾನಸಭಾ ಕ್ಷೇತ್ರದ ವಿಧಾನಸಭಾ ಸದಸ್ಯರನ್ನು ಅಧ್ಯಕ್ಷರನ್ನಾಗಿ ಹಾಗೂ ಅಧಿಕಾರಿಗಳನ್ನೊಳಗೊಂಡ ಆರಾಧನಾ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲಾಗಿದೆ. ಅದರಂತೆ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ನಾಲ್ಕು ಜನ ಅಧಿಕಾರೇತರ ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಂಇ 108 ಮುಸರ 2013, ಬೆಂಗಳೂರು, ದಿನಾಂಕ: 16ನೇ ಜನವರಿ, 2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡ ನಾಲ್ಕು ಜನ ಅಧಿಕಾರೇತರ ಸದಸ್ಯರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಲಾಗಿದೆ.

1	ಶ್ರೀ ಭಾರತೀಶ ಬಿನ್ ದಿ. ಪದ್ಮನಾಭ ಅಮೀನ್, ದೊಡ್ಡ ಅಮೇವು ಮನೆ, ಬಜಾಲು ಗ್ರಾಮ ಮತ್ತು ಅಂಚೆ, ಮಂಗಳೂರು – 575 027 **(ಸಾಮಾನ್ಯ)**	ಸದಸ್ಯರು
2	ಶ್ರೀಮತಿ ಮಮತಾ ಶೆಟ್ಟಿ ಕೋಂ ಶಿವರಾಮ ಶೆಟ್ಟಿ, 4-3-350, ಶೆಟ್ಟಿ ಕಾಂಪೌಂಡ್, ಎಂ.ಜಿ. ರೋಡ್, ಕೆನರಾ ಕಾಲೇಜಿನ ಮುಂಭಾಗ, ಕೊಡಿಯಾಲ್‌ಬೈಲು, ಮಂಗಳೂರು – 575 003 **(ಮಹಿಳೆ)**	ಸದಸ್ಯರು
3	ಕು. ಪ್ರಮೀಳಾ C/o ದಯಾನಂದ ಸಾಗರ, ಸುಂಕದಕಟ್ಟೆ, ಅಶೋಕನಗರ ಅಂಚೆ, ಉರ್ವಸ್ಟೋರ್, ಮಂಗಳೂರು **(ಪರಿಶಿಷ್ಟ ಜಾತಿ)**	ಸದಸ್ಯರು
4	ಕು. ಮಂಗಳಾ ಬಿನ್ ಗುರುವ, ಕುದ್ರೋಳಿ ಗುಡ್ಡೆ, ಕಂಕನಾಡಿ ಬೈಪಾಸ್, ಮಂಗಳೂರು –2 **(ಪರಿಶಿಷ್ಟ ಪಂಗಡ)**	ಸದಸ್ಯರು

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಟಿ.ಜಯರಾಮೇಗೌಡ,

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ. (ಮುಜರಾಯಿ)

P.R. 124
S.C. 25

ಕಂದಾಯ ಸಚಿವಾಲಯ

ವಿಷಯ: ಬೀದರ್ ಜಿಲ್ಲೆ, ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಕಂಇ 67 ಮುಸರ 2007, ದಿನಾಂಕ: 10-10-2008.

2. ಸರ್ಕಾರದ ಆದೇಶ ಸಂಖ್ಯೆ: ಕಂಇ 61 ಮುಆಬಿ 2013, ದಿನಾಂಕ: 17-01-2014.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ: 10-10-2008ರಲ್ಲಿ ಆರಾಧನಾ ಯೋಜನೆಯ ಅನುಷ್ಠಾನಕ್ಕಾಗಿ ವಿಧಾನಸಭಾ ಕ್ಷೇತ್ರವಾರು ಆರಾಧನಾ ಸಮಿತಿಗಳನ್ನು ರಚಿಸಲು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ: 17-01-2014ರಲ್ಲಿ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಆಯಾಯ ವಿಧಾನಸಭಾ ಕ್ಷೇತ್ರದ ವಿಧಾನಸಭಾ ಸದಸ್ಯರನ್ನು ಅಧ್ಯಕ್ಷರನ್ನಾಗಿ ಹಾಗೂ ಅಧಿಕಾರಿಗಳನ್ನೊಳಗೊಂಡ ಆರಾಧನಾ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲಾಗಿದೆ. ಅದರಂತೆ ಬೀದರ್ ಜಿಲ್ಲೆ, ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ನಾಲ್ಕು ಜನ ಅಧಿಕಾರೇತರ ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಂಇ 67 ಮುಸರ 2013, ಬೆಂಗಳೂರು, ದಿನಾಂಕ: 16ನೇ ಜನವರಿ, 2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆ, ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡ ನಾಲ್ಕು ಜನ ಅಧಿಕಾರೇತರ ಸದಸ್ಯರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಲಾಗಿದೆ.

1	ಶ್ರೀ ರಾಘವೇಂದ್ರ ಬಿರಾದಾರ್ ತಂದೆ ಬಾಬು ಬಿರಾದಾರ್, ಚಿಟ್ಟಾ **(ಸಾಮಾನ್ಯ)**	ಸದಸ್ಯರು
2	ಶ್ರೀಮತಿ ಮಂಜುಳ ಗಂಡ ರಾಜಾರೆಡ್ಡಿ, ಚಟ್ನಳ್ಳಿ **(ಮಹಿಳೆ)**	ಸದಸ್ಯರು
3	ಶ್ರೀ ಪ್ರಕಾಶ್ ತಂದೆ ಹನುಮಂತಪ್ಪ ಬಡಿಗೇರ **(ಪರಿಶಿಷ್ಟ ಜಾತಿ)**	ಸದಸ್ಯರು
4	ಶ್ರೀಮತಿ ಜಗದೇವಿ ಗಂಡ ರಘುನಾಥ ರಾಯಗೊಂಡ, ಮನ್ನಾಯಕಹಳ್ಳಿ **(ಪರಿಶಿಷ್ಟ ಪಂಗಡ)**	ಸದಸ್ಯರು

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 125

ಸಿ.ಟಿ.ಜಯರಾಮೇಗೌಡ,

S.C. 25

ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ. (ಮುಜರಾಯಿ)

ಕಂದಾಯ ಸಚಿವಾಲಯ

ವಿಷಯ : ಧಾರವಾಡ ಜಿಲ್ಲೆ, ನವಲಗುಂದ ವಿಧಾನಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಉಲ್ಲೇಖ : 1. ಸರ್ಕಾರದ ಆದೇಶ ಸಂಖ್ಯೆ: ಕಂಇ 67 ಮುಸರ 2007, ದಿನಾಂಕ: 10-10-2008.

2. ಸರ್ಕಾರದ ಆದೇಶ ಸಂಖ್ಯೆ: ಕಂಇ 61 ಮುಆಬಿ 2013, ದಿನಾಂಕ: 17-01-2014.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ: 10-10-2008ರಲ್ಲಿ ಆರಾಧನಾ ಯೋಜನೆಯ ಅನುಷ್ಠಾನಕ್ಕಾಗಿ ವಿಧಾನಸಭಾ ಕ್ಷೇತ್ರವಾರು ಆರಾಧನಾ ಸಮಿತಿಗಳನ್ನು ರಚಿಸಲು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ: 17-01-2014ರಲ್ಲಿ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಆಯಾಯ ವಿಧಾನಸಭಾ ಕ್ಷೇತ್ರದ ವಿಧಾನಸಭಾ ಸದಸ್ಯರನ್ನು ಅಧ್ಯಕ್ಷರನ್ನಾಗಿ ಹಾಗೂ ಅಧಿಕಾರಿಗಳನ್ನೊಳಗೊಂಡ ಆರಾಧನಾ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲಾಗಿದೆ. ಅದರಂತೆ ಧಾರವಾಡ ಜಿಲ್ಲೆ, ನವಲಗುಂದ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ನಾಲ್ಕು ಜನ ಅಧಿಕಾರೇತರ ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಂಇ 113 ಮುಸರ 2013, ಬೆಂಗಳೂರು, ದಿನಾಂಕ: 16ನೇ ಜನವರಿ, 2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಧಾರವಾಡ ಜಿಲ್ಲೆ, ನವಲಗುಂದ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡ ನಾಲ್ಕು ಜನ ಅಧಿಕಾರೇತರ ಸದಸ್ಯರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಲಾಗಿದೆ.

1	ಶ್ರೀ ಮಲ್ಲಿಕಾರ್ಜುನ ರೇವಡಿಗಾರ, ನವಲಗುಂದ ತಾಲ್ಲೂಕು	**(ಸಾಮಾನ್ಯ)**	ಸದಸ್ಯರು
2	ಶ್ರೀಮತಿ ರಿಂದಾಲಿಂಗರೆಡ್ಡಿ, ನವಲಗುಂದ ತಾಲ್ಲೂಕು	**(ಮಹಿಳೆ)**	ಸದಸ್ಯರು
3	ಶ್ರೀ ದೇವೇಂದ್ರ ಹಲಗಿ, ನವಲಗುಂದ ತಾಲ್ಲೂಕು	**(ಪರಿಶಿಷ್ಟ ಜಾತಿ)**	ಸದಸ್ಯರು
4	ಶ್ರೀ ಭರತ ರಾಮಚಂದ್ರ ತಳವಾರ, ನವಲಗುಂದ ತಾಲ್ಲೂಕು	**(ಪರಿಶಿಷ್ಟ ಪಂಗಡ)**	ಸದಸ್ಯರು

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 126

ಸಿ.ಟಿ.ಜಯರಾಮೇಗೌಡ,

S.C. 25

ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ. (ಮುಜರಾಯಿ)

ಒಳಾಡಳಿತ ಸಚಿವಾಲಯ

ಸುತ್ತೋಲೆ

ಸಂಖ್ಯೆ: ಹೆಚ್‌ಡಿ 500 ಎಸ್‌ಎಸ್‌ಟಿ 2014 ಬೆಂಗಳೂರು, ದಿನಾಂಕ: 29-01-2015

ವಿಷಯ: ಗೂಂಡಾ ಕಾಯ್ದೆಯಡಿ ಆದೇಶವನ್ನು ಹೊರಡಿಸುವ ಸಂಬಂಧ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವ ಬಗ್ಗೆ

ಉಲ್ಲೇಖ : ಸರ್ಕಾರಿ ವಕೀಲರು, ಅಡ್ವೋಕೇಟ್ ಜನರಲ್ ಕಛೇರಿ, ಬೆಂಗಳೂರು ರವರ ಪತ್ರ ಸಂಖ್ಯೆ: 570/ಎಹೆಚ್‌ಡಿ/2014-15, ದಿನಾಂಕ: 26-09-2014.

ಕರ್ನಾಟಕ ಅಕ್ರಮ ಕಳ್ಳಭಟ್ಟಿ ಸಾರಾಯಿ ವ್ಯವಹಾರ, ಔಷಧಾಪರಾಧ, ಜೂಜುಕೋರ, ಗೂಂಡಾ ಅನೈತಿಕ ವ್ಯವಹಾರಗಳ ಅಪರಾಧ, ಕೊಳಚೆ ಪ್ರದೇಶಗಳನ್ನು ಅಕ್ರಮವಾಗಿ ಆಕ್ರಮಿಸಿಕೊಳ್ಳುವ ಮತ್ತು ವಿಡಿಯೋ ಅಥವಾ ಆಡಿಯೋ ಪೈರಸಿ ಚಟುವಟಿಕೆಗಳ ತಡೆ ಅಧಿನಿಯಮ 1985ರ (1985ರ ಕರ್ನಾಟಕ ಅಧಿನಿಯಮ 12) ಅಡಿಯಲ್ಲಿ ಆಯಾ ಜಿಲ್ಲೆಗಳ ಜಿಲ್ಲಾ ಮ್ಯಾಜೀಸ್ಟ್ರೇಟ್‌ಗಳಿಗೆ ಪ್ರತಿಬಂಧಕ ಬಂಧನ ಮಾಡುವ ಅಧಿಕಾರವನ್ನು ಸದರಿ ಕಾಯ್ದೆಯ ಕಲಂ 3(1)ರಲ್ಲಿ ನೀಡಲಾಗಿದೆ. ಮೊದಲನೆಯದಾಗಿ ಯಾವುದೇ ಸ್ವತಂತ್ರ ಪ್ರಜೆಯನ್ನು ಪ್ರತಿಬಂಧಕ ಬಂಧನದಲ್ಲಿ ಇರಿಸುವ ಸಂಬಂಧದಲ್ಲಿ ಭಾರತ ಸಂವಿಧಾನ ಆರ್ಟಿಕಲ್ 22(5)ರ ಅಡಿಯಲ್ಲಿ ನಿಗಧಿಗೊಳಿಸಿದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ಅದೇ ನಿಯಮಗಳನ್ನು ಗೂಂಡಾ ಕಾಯ್ದೆಯ ಕಲಂ 8ರಲ್ಲಿ ವಿವರವಾಗಿ ತಿಳಿಸಲಾಗಿದೆ. ಆದಾಗ್ಯೂ ಅನೇಕ ಜಿಲ್ಲಾಧಿಕಾರಿಗಳು, ಸ್ಥಳೀಯ ಪೊಲೀಸ್ ಅಧಿಕಾರಿಗಳ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸುತ್ತಿಲ್ಲ. ಮುಖ್ಯವಾಗಿ ತಮಗೆ ಸಲ್ಲಿಸಿದ ಪೊಲೀಸ್ ವರದಿಗಳಲ್ಲಿ ಸಂಬಂಧಿಸಿದ ವ್ಯಕ್ತಿಗಳನ್ನು ಬಂಧನದಲ್ಲಿ ಇರಿಸಲು ಸೂಕ್ತ ಹಾಗೂ ಗಂಭೀರ

ತರಹದ ಕಾರಣ ಹಾಗೂ ಪುರಾವೆಗಳನ್ನು ಒದಗಿಸಲಾಗಿದೆಯೇ, ಎನ್ನುವುದನ್ನು ಪರಿಶೀಲಿಸದೆ, ಬಂಧನದ ಆದೇಶಗಳನ್ನು ನೀಡುತ್ತಿರುವುದನ್ನು ನ್ಯಾಯಾಲಯವು ಅನೇಕ ಪ್ರಕರಣಗಳಲ್ಲಿ ಗಂಭೀರವಾಗಿ ಪರಿಗಣಿಸಿದೆ.

ಗೂಂಡಾ ಕಾಯ್ದೆಯಡಿ ಬಂಧನ ಆಜ್ಞೆ ಹೊರಡಿಸುವ ಮುನ್ನ ಈ ಕೆಳಕಂಡ ಅಂಶಗಳನ್ನು ತಪ್ಪದೇ ಪಾಲಿಸತಕ್ಕದ್ದು.

1. ಬಂಧನ ಆಜ್ಞೆಯನ್ನು ಮಾಡುವ ಬಂಧನ ಪ್ರಾಧಿಕಾರವು ಬಂಧನಕ್ಕೆ ಸಾಕಷ್ಟು ಕಾರಣಗಳಿವೆಯೆಂದು ಖಚಿತಪಡಿಸಿಕೊಂಡು ಸಮಾಜದ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಅತ್ಯಂತ ಅವಶ್ಯಕವಿದೆ ಎಂಬ ಹಿನ್ನೆಲೆಯಲ್ಲಿ ಕಾನೂನು ಮತ್ತು ವಸ್ತು ಸ್ಥಿತಿಯನ್ನು ಮನವರಿಕೆ ಮಾಡಿಕೊಂಡು ಬಂಧನ ಆಜ್ಞೆಯನ್ನು ಹೊರಡಿಸಬೇಕು.

2. ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ, ಅಪರಾಧಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ ಅಧಿನಿಯಮ, 1985ರ 3ನೇ ಪ್ರಕರಣದ (1)ನೇ ಉಪ ಪ್ರಕರಣ ಅಥವಾ (2)ನೇ ಉಪ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಬಂಧನ ಆಜ್ಞೆಗಳಿಗೆ ಬಂಧನ ಪ್ರಾಧಿಕಾರವು ಸೂಕ್ತ ಕಾರ್ಯ ವಿಧಾನವನ್ನು ಅನುಸರಿಸುವುದು ಹಾಗೂ ಈ ಕೆಳಗಿನ 3 ಅಂಶಗಳನ್ನು ನಮೂದಿಸುವುದು ಅವಶ್ಯಕವಾಗಿದೆ.

ಅ) ಬಂಧನದಲ್ಲಿ ಇರಿಸುವ ಸಂದರ್ಭದಲ್ಲಿ ಭಾರತ ಸಂವಿಧಾನದ 22(5)ರ ಅನುಚ್ಛೇದದ ಅಡಿಯಲ್ಲಿ ಉದ್ದೇಶಿಸಲಾದಂತೆ ಬಂಧನ ಆದೇಶದ ವಿರುದ್ಧ ಮನವಿಯನ್ನು ಸಲ್ಲಿಸಲು ಬಂಧಿಗೆ ಅವಕಾಶವಿರುತ್ತದೆ.

ಆ) ಬಂಧನ ಆಜ್ಞೆಯ ಆದೇಶದ ವಿರುದ್ಧ ಗೂಂಡಾ ಬಂಧಿಯ ಮನವಿಯನ್ನು ರಾಜ್ಯ ಸರ್ಕಾರಕ್ಕೆ ಅಥವಾ ಬಂಧನ ಪ್ರಾಧಿಕಾರಕ್ಕೆ ಸಲ್ಲಿಸಲು ಅವಕಾಶವಿರುತ್ತದೆ.

ಇ) ಬಂಧನ ಆಜ್ಞೆಯ ಆದೇಶದ ವಿರುದ್ಧ ಗೂಂಡಾ ಬಂಧಿಯು ಸಲಹಾ ಮಂಡಳಿಗೆ ಮನವಿಯನ್ನು ಸಲ್ಲಿಸಲು ಅವಕಾಶವಿರುತ್ತದೆ.

3. ಕಾಯ್ದೆಯ ಅಧಿನಿಯಮದ 8ನೇ ಪ್ರಕರಣದ ಅಡಿಯಲ್ಲಿ ತಿಳಿಸಲಾದಂತೆ, ಬಂಧನ ಪ್ರಾಧಿಕಾರವು ಬಂಧನ ಆಜ್ಞೆಯ ಆದೇಶವನ್ನು ಹೊರಡಿಸಿದ ದಿನಾಂಕದಿಂದ 5 ದಿನಗಳೊಳಗಾಗಿ ರಾಜ್ಯ ಸರ್ಕಾರಕ್ಕೆ ಬಂಧನ ಆದೇಶವನ್ನು ಸಲ್ಲಿಸತಕ್ಕದ್ದು.

4. ಅಧಿನಿಯಮದ 3(3)ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಬಂಧನ ಆಜ್ಞೆಯನ್ನು ಹೊರಡಿಸಿದ ದಿನಾಂಕದಿಂದ 12 ದಿನಗಳೊಳಗಾಗಿ ಅನುಮೋದಿಸತಕ್ಕದ್ದು.

5. ಬಂಧನ ಪ್ರಾಧಿಕಾರವು ಬಂಧನ ಆಜ್ಞೆಯ ಆದೇಶ ಕಳುಹಿಸುವಾಗ ಬಂಧನಕ್ಕೆ ಕಾರಣಗಳು ಮತ್ತು ಸಂಬಂಧಿಸಿದ ಇತರೆ ದಾಖಲೆಗಳನ್ನು ಸ್ಪಷ್ಟ ಪ್ರತಿಗಳಲ್ಲಿ ಸಲ್ಲಿಸುವುದು.

6. ರಾಜ್ಯ ಸರ್ಕಾರವು ಅಧಿನಿಯಮದ 10ನೇ ಪ್ರಕರಣದ ಅಡಿಯಲ್ಲಿ ಬಂಧನ ಆಜ್ಞೆಯನ್ನು ಹೊರಡಿಸಿದ ದಿನಾಂಕದಿಂದ 3 ವಾರದೊಳಗೆ ಸಲಹಾ ಮಂಡಳಿಗೆ ವಿಷಯವನ್ನು ಕಳುಹಿಸತಕ್ಕದ್ದು.

7. ಬಂಧನ ಪ್ರಾಧಿಕಾರವು ಬಂಧಿಗೆ ಆತನು ತಿಳಿದಿರುವ ಭಾಷೆಯಲ್ಲಿ ಬಂಧನ ಆಜ್ಞೆಯ ಆದೇಶ ಹಾಗೂ ಬಂಧನಕ್ಕೆ ಕಾರಣಗಳು ಮತ್ತು ಇತರೆ ದಾಖಲಾತಿಗಳನ್ನು ಒದಗಿಸುವುದು.

8. ಅಕ್ರಮ ಕಳ್ಳಭಟ್ಟಿ, ಔಷಧಾಪರಾಧ, ಜೂಜುಕೋರ, ಗೂಂಡಾಗಳ, ಅನೈತಿಕ ವ್ಯವಹಾರ, ಅಪರಾಧಗಳ ಮತ್ತು ಕೊಳಚೆ ಪ್ರದೇಶಗಳನ್ನು ಅಕ್ರಮಿಸಿಕೊಳ್ಳುವ ಸಂದರ್ಭದಲ್ಲಿ ಅಧಿನಿಯಮದ 3(2)ನೇ ಪ್ರಕರಣಗಳ ಅಡಿಯಲ್ಲಿ ಬಂಧನ ಪ್ರಾಧಿಕಾರವು ಬಂಧನ ಆಜ್ಞೆ ಆದೇಶದಲ್ಲಿ 'ಗೂಂಡಾ' ಎಂಬ ಪದದ ಬದಲಾಗಿ ಅಕ್ರಮ ಎಸಗಿರುವ ಅಪರಾಧದ ಪದವನ್ನು ಉಪಯೋಗಿಸತಕ್ಕದ್ದು. ಏಕೆಂದರೆ, 'ಗೂಂಡಾ' ಎಂಬ ಪದವು ಭಾರತ ದಂಡ ಸಂಹಿತೆಯು

i. ಭಾರತೀಯ ದಂಡ ಸಂಹಿತೆಯು ಅಧ್ಯಾಯ VIII 141ರಿಂದ 160ನೇ ಪ್ರಕರಣಗಳ ಅಡಿಯಲ್ಲಿ ಸಾರ್ವಜನಿಕ ನೆಮ್ಮದಿಯನ್ನು ಹಾಳುಮಾಡುವ ಅಪರಾಧಗಳು

ii. ಭಾರತೀಯ ದಂಡ ಸಂಹಿತೆಯು ಅಧ್ಯಾಯ XV 295 ರಿಂದ 298 ನೇ ಪ್ರಕರಣಗಳ ಅಡಿಯಲ್ಲಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡುವ ಅಪರಾಧಗಳು

iii. ಭಾರತೀಯ ದಂಡ ಸಂಹಿತೆಯು ಅಧ್ಯಾಯ XVI 299 ರಿಂದ 376 ನೇ ಪ್ರಕರಣಗಳ ಅಡಿಯಲ್ಲಿ ಅಪರಾಧಗಳು

iv. ಭಾರತೀಯ ದಂಡ ಸಂಹಿತೆಯು ಅಧ್ಯಾಯ XVII 378 ರಿಂದ 462 ನೇ ಪ್ರಕರಣಗಳ ಅಡಿಯಲ್ಲಿ ಮಾನವ ಸ್ನೇಹಕ್ಕೆ ಬಾಧಕವಾಗುವ ಅಪರಾಧಗಳು

v. ಭಾರತೀಯ ದಂಡ ಸಂಹಿತೆಯು ಅಧ್ಯಾಯ XXII 503 ರಿಂದ 511 ನೇ ಪ್ರಕರಣಗಳ ಅಡಿಯಲ್ಲಿ ಭಯೋತ್ಪಾದಕ ಅಪರಾಧಿಕ ಕೃತ್ಯಗಳು, ಅವಮಾನ ಮತ್ತು ಕಿರುಕುಳ

9. ಸಾರ್ವಜನಿಕ ಸುವ್ಯವಸ್ಥೆ ಕಾಪಾಡುವ ಹಿನ್ನೆಲೆಯಲ್ಲಿ ಬಂಧನ ಪ್ರಾಧಿಕಾರವು ಬಂಧನ ಆದೇಶವನ್ನು ಹೊರಡಿಸಿವಾಗ ಗೂಂಡಾ ಬಂಧಿಗೆ ಸಂಬಂಧಿಸಿದ ಬಂಧನಕ್ಕೆ ಕಾರಣಗಳು ಮತ್ತು ಇತರೆ ದಾಖಲೆಗಳನ್ನು ಒದಗಿಸಿ, ಸದರಿ ಗೂಂಡಾ ಬಂಧಿಯ ವಿರುದ್ಧ ದಾಖಲಾಗಿರುವ ಪ್ರಕರಣಗಳ ಪೂರ್ಣ ವಿವರ ಅಂದರೆ ಅಪರಾಧ ವಿವರಗಳು, ಆಗಿರುವ ಶಿಕ್ಷೆ, ಬಿಡುಗಡೆಗೊಂಡ ಮಾಹಿತಿ ಹಾಗೂ ಜಾಮೀನು ಪಡೆದಿರುವ ಮಾಹಿತಿ ವಿವರಿಸಬೇಕು ಹಾಗೂ ಈತ/ಈಕೆ ಸ್ವಾಭಾವಿಕ ಅಪರಾಧಿಯೇ, ಎಂಬುದನ್ನು ನಮೂದಿಸಬೇಕು.

P.R. 127
S.C. 200

ಗೋವಿಂದಸ್ವಾಮಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ. (ಕಾನೂನು ಮತ್ತು ಸುವ್ಯವಸ್ಥೆ)

ENERGY SECRETARIAT

Sub: To execute the Joint Venture Agreement for Development of the coal block allotted at Deocha-Pachami in West Bengal- Orders – Reg..

Read: 1) Govt. Letter No. EN 16 PPC 2014 dated: 07.03.2014

2) Letter No. A1R7A dated: 20.05.2014 from MD, KPCL, Bengaluru.

PREAMBLE:

1. Karnataka Power Corporation Ltd., had sought coal block allocation to meet the requirements of BTPS Unit III-700 MW, YTPS-2x800 MW and Edlapur Thermal Power Station-lx800 MW. The Government of India, Ministry of Coal vide notification No.13016/26/2004-CA-I (Pt.) dated September 06, 2013 has allotted 382 million tonnes of coal reserves in the Deocha-Pachami blocks in West Bengal out of the total reserves of 2102 million tonnes. Allocation has been given from this block to 7 utilities and the West Bengal government has to take the lead in the formation of the company and to call for tenders for developing the mines. M/s West Bengal Power Development Corporation has taken the responsibility of drafting the Joint Venture Agreement.

2. In the 239th meeting of the Board of Directors of KPCL held on 04.03.2014, the Board has authorized Managing Director, KPCL to address Govt. of Karnataka for seeking approval for the equity investment required to be made in the JV company. Government of Karnataka vide letter read at (1) above has conveyed in principle approval to the same.

3. Subsequently, the draft documents have again examined in the light of the new Companies Act 2013 came into effect recently & a revised final draft agreement has been circulated to all the partner utilities seeking their comments and approval. A few changes have been made to the draft. These have been also examined. The proposal of Karnataka Power Corporation Limited has been examined and hence the following order

GOVERNMENT ORDER No. EN 16 PPC 2014 BENGALURU, DATED 11th DECEMBER 2014

1. Under the circumstances explained above, the Government are pleased to accord approval to authorize the Managing Director, KPCL to execute the Joint Venture Agreement for development of the Coal block allotted at Deocha-Pachami in West Bengal to meet the requirements of BTPS unit III-700 MW, YTPS-2x800 MW and Edlapur Thermal Power Station-lx800 MW, with the following terms and conditions:

 i) to execute the Joint Venture Agreement for development of the coal block allotted at Deocha-Pachami and to subscribe to the memorandum of Association & Article of Association of the proposed Deocha-Pachami Coal Limited, a public limited company formed by the 7 utilities as a JV company with or without changes as may be deemed necessary to give effect to the proposal to have a Joint Venture for operationalizing the captive coal block development in terms of Govt. of India allocation requirements.

 ii) to subscribe 18.2% of the share capital of the proposed company through KPCL to participate in the coal block development.

 iii) to seek the required equity from GoK to meet the KPCL share of equity in the Joint Venture Company as and when required, after finalization of the DPR for captive coal mining project.

 iv) to approve the bid process to be initiated by the West Bengal entity for inviting competitive bids for mine development and operation as per the guidelines issued by the Planning Commission, GoI and the Ministry of Coal from time to time.

 v) to carry out any modifications or change in the JV Agreement arising out of discussions among the 7 partnering utilities if considered necessary, with the approval of the Board of Directors of KPCL.

2. The Thermal Plant wise requirements to be assessed properly by KPCL before committing to the end use requirements. The approval for Joint Venture Agreement is subject to the condition that, State Government should not be made liable in this project and no Government guarantee should be expected. Even the equity contribution by KPCL in the Joint Venture should be out of the regular equity investment into KPCL by GoK (out of the budgetary provision) in FY 2014-15.

This order is issued with the concurrence of the Finance Department vide Note No.FD 605 Exp/I 2014 dated: 10.06.2014.

BY ORDER AND IN THE NAME OF THE GOVERNOR OF KARNATAKA

P.R. 129

S.C. 50

K.L. RAMACHANDRA

DEPUTY SECRETARY TO GOVERNMENT

ENERGY DEPARTMENT

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಸಿಆಸುಇ 97 ಸೇಮುಇ 2014, ಬೆಂಗಳೂರು, ದಿನಾಂಕ: 05–02–2015.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇಮುಇ 2014, ದಿನಾಂಕ: 15–12–2014ರ ಅಧಿಸೂಚನೆಯ ಕ್ರಮ ಸಂಖ್ಯೆ: 06 ರಲ್ಲಿ ಡಾ॥ ಬಿ.ಎನ್.ಪ್ರಕಾಶ್, ನಿರ್ದೇಶಕರು, (ಪ್ರಕಟಣೆಗಳು) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು. ಇವರ "ಜನ್ಮ ದಿನಾಂಕ: 25–02–1955 ಹಾಗೂ ನಿವೃತ್ತಿ ದಿನಾಂಕ: 28–02–2015" ಎಂದು ಇರುವುದನ್ನು ಕ್ರಮವಾಗಿ "ಜನ್ಮ ದಿನಾಂಕ: 25–07–1955 ಹಾಗೂ ನಿವೃತ್ತಿ ದಿನಾಂಕ: 31–07–2015" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 130

ಚಂದ್ರಶೇಖರ,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–6).

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ: ಶ್ರೀ ಹೆಚ್.ಬಿ. ರಘುನಾಥ್, ಸರ್ಕಾರದ ಉಪ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಇವರಿಗೆ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: 1. ಅಧಿಕಾರಿಯವರ ಮನವಿ ದಿನಾಂಕ: 14–11–2014.

2. ಮಹಾಲೇಖಪಾಲರ ಪತ್ರ ಸಂಖ್ಯೆ: PV-13/R-1/SRV-108/2014–15/114, ದಿನಾಂಕ: 31–12–2014.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಮನವಿಯಲ್ಲಿ ಶ್ರೀ ಹೆಚ್.ಬಿ.ರಘುನಾಥ್, ಸರ್ಕಾರದ ಉಪ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಇವರು ಕೌಟುಂಬಿಕ ಹಾಗೂ ವೈಯಕ್ತಿಕ ಕಾರಣಗಳಿಂದಾಗಿ ದಿನಾಂಕ: 28–02–2015ರಿಂದ ಜಾರಿಗೆ ಬರುವಂತೆ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಮಹಾಲೇಖಪಾಲರ ಪತ್ರದಲ್ಲಿ ಸದರಿ ಅಧಿಕಾರಿಯವರ ಸೇವಾ ಪುಸ್ತಕವನ್ನು ಪರಿಶೀಲಿಸಿ, ದಿನಾಂಕ: 31–08–2014 ಕ್ಕೆ ಅಧಿಕಾರಿಯವರು 38 ವರ್ಷ, 3 ತಿಂಗಳು ಹಾಗೂ 18 ದಿನಗಳ ಅರ್ಹತಾದಾಯಕ ಸೇವೆಯನ್ನು ಪೂರ್ಣಗೊಳಿಸಿದ್ದಾರೆಂದು ದೃಢೀಕರಿಸಿರುತ್ತಾರೆ. ಸದರಿ ಅಧಿಕಾರಿಯವರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 442 ಸಲುಸೇ 2014, ಬೆಂಗಳೂರು, ದಿನಾಂಕ: 04ನೇ ಫೆಬ್ರವರಿ, 2015

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಹೆಚ್.ಬಿ.ರಘುನಾಥ್, ಸರ್ಕಾರದ ಉಪ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ 285(1)(ಎ) ಅನ್ವಯ ದಿನಾಂಕ: 28–02–2015ರ ಅಪರಾಹ್ನದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 131

ಚಂದ್ರಶೇಖರ,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–6).

ನಗರಾಭಿವೃದ್ಧಿ ಸಚಿವಾಲಯ

ವಿಷಯ: ಮೈಸೂರು ನಗರದ ಯಾದವಗಿರಿ ವೃತ್ತದಿಂದ ರಾಮಕೃಷ್ಣ ಆಶ್ರಮದ ಹಿಂಭಾಗದ ಮಾರ್ಗ ಆಂಜನೇಯಸ್ವಾಮಿ ದೇವಸ್ಥಾನದ ಮೂಲಕ ಜಾವಾ ಅಪಾರ್ಟ್‌ಮೆಂಟ್‌ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಅಂದಾಜು ಮೊತ್ತ ರೂ. 495.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಮೈ.ನ.ಪ್ರಾ ರವರ ಪತ್ರ ಸಂಖ್ಯೆ: ಮೈ.ನ.ಪ್ರಾ/ವ5ಎ/2014–15, ದಿನಾಂಕ: 03–01–2014 ಮತ್ತು 22–11–2014.

ಪ್ರಸ್ತಾವನೆ:

ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮೈಸೂರು ರವರು ಮೇಲೆ ಓದಲಾದ ಪ್ರಸ್ತಾವನೆಯಲ್ಲಿ ಮೈಸೂರು ನಗರದ ಯಾದವಗಿರಿ ವೃತ್ತದಿಂದ ಪ್ರಾರಂಭವಾಗುವ ರಸ್ತೆಯು ರಾಮಕೃಷ್ಣ ಆಶ್ರಮದ ಹಿಂಭಾಗದ ಮಾರ್ಗ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಬೃಂದಾವನ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುತ್ತದೆ. ಸದರಿ ರಸ್ತೆಯು ಮೈಸೂರು ನಗರದ ಒಂದು ಪ್ರತಿಷ್ಠಿತ ರಸ್ತೆಯಾಗಿದ್ದು, ಇದರ ಅಭಿವೃದ್ಧಿ ಕಾಮಗಾರಿಯನ್ನು ಪ್ರಾಧಿಕಾರದಿಂದ ಕೈಗೊಳ್ಳಲು 2013–14ನೇ ಸಾಲಿನ ಆಯವ್ಯಯದಲ್ಲಿ ಹೊಸ ಕಾಮಗಾರಿಗಳ ಅಡಿಯಲ್ಲಿ ರೂ.200.00 ಲಕ್ಷಗಳನ್ನು ಕಾಯ್ದಿರಿಸಿರುವುದಾಗಿ, ಸದರಿ ರಸ್ತೆಯ ಪ್ರಾರಂಭದಲ್ಲಿ ಸುಮಾರು 7.50 ಮೀಟರ್‌ಗಳ ಅಗಲವಿದ್ದು, ಈ ರಸ್ತೆಯಲ್ಲಿ ವಾಹನ ದಟ್ಟಣೆಯನ್ನು ಪರಿಗಣಿಸಿ, ರಸ್ತೆಯನ್ನು 14 ಮೀಟರ್‌ಗಳಿಗೆ ಅಗಲೀಕರಣ ಮಾಡಲು ಉದ್ದೇಶಿಸಲಾಗಿರುವುದಾಗಿ ಅದರಂತೆ ಕಾಮಗಾರಿಯನ್ನು ಕೈಗೊಳ್ಳಲು 2013–14ನೇ ಸಾಲಿನ ಲೋಕೋಪಯೋಗಿ ಇಲಾಖೆ, ಮೈಸೂರು ವೃತ್ತದ ಪಟ್ಟಿಯನ್ನು ಅಳವಡಿಸಿಕೊಂಡು ಮತ್ತು ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ರವರಿಂದ ತಾಂತ್ರಿಕ ಪರಿಶೀಲನೆ ಮಾಡಿಸಿಕೊಂಡು, ಕಾಮಗಾರಿಯನ್ನು ಕೈಗೊಳ್ಳಲು ರೂ. 495.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 35 ಮೈಅಪ್ರಾ 2014, ಬೆಂಗಳೂರು, ದಿನಾಂಕ: 29–01–2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೈಸೂರು ನಗರದ ಯಾದವಗಿರಿ ವೃತ್ತದಿಂದ ರಾಮಕೃಷ್ಣ ಆಶ್ರಮದ ಹಿಂಭಾಗದ ಮಾರ್ಗ ಆಂಜನೇಯಸ್ವಾಮಿ ದೇವಸ್ಥಾನದ ಮೂಲಕ ಜಾವಾ ಅಪಾರ್ಟ್‌ಮೆಂಟ್‌ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಅಂದಾಜು ಮೊತ್ತ ರೂ. 495.00 ಲಕ್ಷಗಳ (ನಾಲ್ಕು ನೂರಾ ತೊಂಭತ್ತೈದು ಲಕ್ಷಗಳು ಮಾತ್ರ) ಅಂದಾಜು ಪಟ್ಟಿಗೆ ಈ ಕೆಳಕಂಡ ಷರತ್ತುಗಳೊಳಪಟ್ಟಂತೆ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

1) ಈ ಕಾಮಗಾರಿಯನ್ನು ರೂ.495.00 ಲಕ್ಷಗಳ ಮಿತಿಯಲ್ಲಿಯೇ ಯಾವುದೇ ಹೆಚ್ಚುವರಿಯಾಗದಂತೆ ಅನುಷ್ಠಾನಗೊಳಿಸತಕ್ಕದ್ದು.
2) ಈ ಕಾಮಗಾರಿಯ ಅಂದಾಜು ಪಟ್ಟಿಗೆ ಸಕ್ಷಮ ತಾಂತ್ರಿಕ ಪ್ರಾಧಿಕಾರದಿಂದ ತಾಂತ್ರಿಕ ಮಂಜೂರಾತಿಯನ್ನು ಪಡೆದುಕೊಂಡು, ನಂತರ ಟೆಂಡರ್ ಕರೆಯಲು ಕ್ರಮ ವಹಿಸತಕ್ಕದ್ದು.
3) ಈ ಕಾಮಗಾರಿಯ ಟೆಂಡರ್ ಪ್ರಕ್ರಿಯೆಗಳನ್ನು ಕೆ.ಟಿ.ಪಿ.ಪಿ ಕಾಯ್ದೆ1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು 2000 ಹಾಗೂ E-proc portal ಮುಖಾಂತರ ಕೈಗೊಂಡು ಟೆಂಡರ್‌ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು, ನಂತರ ಮುಂದಿನ ಕ್ರಮ ವಹಿಸತಕ್ಕದ್ದು.
4) ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರರವರು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಗಳನ್ವಯ ಸರ್ಕಾರದ ಅನುಮೋದನೆ ಪಡೆದುಕೊಳ್ಳುವುದು.

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

5) ಈ ಯೋಜನೆಗೆ ಸಂಬಂಧಪಟ್ಟಂತೆ ಯೋಜನೆಗಳು ಜಾರಿ ಇರುವ ಪೂರ್ಣಾವಧಿಯಲ್ಲಿ ಗುಣಮಟ್ಟ ಹಾಗೂ ಪ್ರಮಾಣಗಳ ತಪಾಸಣೆಗಾಗಿ Third Party Consultants ಅನ್ನು ನೇಮಿಸಿಕೊಳ್ಳುವುದು.

6) ಯೋಜನೆಯಲ್ಲಿ ಯಾವುದೇ ಬದಲಾವಣೆ ಮಾಡಬೇಕಾದಲ್ಲಿ ಸರ್ಕಾರದ ಗಮನಕ್ಕೆ ತಂದು ಅಂತಹ ಬದಲಾವಣೆಗಳನ್ನು ನಿರ್ವಹಿಸುವ ಮುನ್ನ ಸರ್ಕಾರದ ಅನುಮೋದನೆ ಪಡೆದುಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿ.ಎಫ್.ಪಿ 2008 ದಿನಾಂಕ: 16–05–2008ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 132

ವಿ.ರಾಜೇಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ನಗರಾಭಿವೃದ್ಧಿ ಸಚಿವಾಲಯ

ವಿಷಯ: ಮೈಸೂರು ನಗರದ ಬಲವತ್ತ ಗ್ರಾಮದ ಮೂಲಭೂತ ಸೌಕರ್ಯಗಳಾದ ಒಳಚರಂಡಿ ಮತ್ತು ರಸ್ತೆ ಅಭಿವೃದ್ಧಿ ಹೆಚ್ಚುವರಿ ಕಾಮಗಾರಿಯನ್ನು ಕೈಗೊಳ್ಳಲು ಅಂದಾಜು ಮೊತ್ತ ರೂ. 150.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಮೈ.ನ.ಪ್ರಾ ರವರ ಪತ್ರ ಸಂಖ್ಯೆ: ಮೈ.ನ.ಪ್ರಾ/ವ.ಕ–5ಎ/12/2013–14, ದಿನಾಂಕ: 03–01–2014 ಮತ್ತು 23–11–2014.

ಪ್ರಸ್ತಾವನೆ:

ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮೈಸೂರು ರವರು ಮೇಲೆ ಓದಲಾದ ಪ್ರಸ್ತಾವನೆಯಲ್ಲಿ ಮೈಸೂರು ನಗರದ ಬಲವತ್ತ ಗ್ರಾಮದ ಮೂಲಭೂತ ಸೌಕರ್ಯಗಳಾದ ಒಳಚರಂಡಿ ಮತ್ತು ರಸ್ತೆ ಅಭಿವೃದ್ಧಿ ಹೆಚ್ಚುವರಿ ಕಾಮಗಾರಿಯನ್ನು ಮೊತ್ತ ರೂ. 285.00 ಲಕ್ಷಗಳ ಅಂದಾಜಿನಲ್ಲಿ ಕೈಗೊಂಡು ಪೂರ್ಣಗೊಳಿಸುವ ಹಂತದಲ್ಲಿದೆ. ಹಾಲಿ ಗ್ರಾಮದಲ್ಲಿ ಮೂಲ ಅಂದಾಜಿನಲ್ಲಿ ಸೇರ್ಪಡೆಗೊಳ್ಳದ ಕೆಲವು ರಸ್ತೆಗಳಿದ್ದು, ಈ ರಸ್ತೆಗಳಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ರಸ್ತೆ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುವ ಸಲುವಾಗಿ, ಅದರಂತೆ ಸದರಿ ಕಾಮಗಾರಿಯನ್ನು 2013–14ನೇ ಸಾಲಿನ ಪ್ರಾಧಿಕಾರದ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡಿದ್ದು, ರೂ.50.00 ಲಕ್ಷಗಳನ್ನು ಕಾಯ್ದಿರಿಸಿರುವುದಾಗಿ ಈಗಾಗಲೇ ಪೂರ್ಣಗೊಂಡಿರುವ ಒಳಚರಂಡಿ ಮತ್ತು ರಸ್ತೆಗಳನ್ನು ರಸ್ತೆಯ ಕೆಲಸಗಳನ್ನು ಹೊರತುಪಡಿಸಿ, ಬಾಕಿ ಉಳಿದಿರುವ ಕೆಲಸಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಅದರಂತೆ ಕಾಮಗಾರಿಯ ಅಂದಾಜು ಪಟ್ಟಿಯನ್ನು 2013–14ರ ಸಾಲಿನ ಲೋಕೋಪಯೋಗಿ ಇಲಾಖೆ, ಮೈಸೂರು ವೃತ್ತದ ದರಪಟ್ಟಿ ಮತ್ತು 2013–14ರ ಸಾಲಿನ ಕ.ನ.ನೀ & ಒ.ಚ ಮಂಡಳಿರವರ ದರ ಪಟ್ಟಿಯನ್ನು ಅಳವಡಿಸಿಕೊಂಡು, ಹಾಗೂ ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ರವರಿಂದ ರೂ.150.00 ಲಕ್ಷಗಳಿಗೆ ತಾಂತ್ರಿಕ ಪರಿಶೀಲನೆ ಮಾಡಿಸಿಕೊಂಡು, ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ರೂ.150.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 34 ಮೈಅಪ್ರಾ 2014, ದಿನಾಂಕ: 29–01–2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೈಸೂರು ನಗರದ ಬಲವತ್ತ ಗ್ರಾಮದ ಮೂಲಭೂತ ಸೌಕರ್ಯಗಳಾದ ಒಳಚರಂಡಿ ಮತ್ತು ರಸ್ತೆ ಅಭಿವೃದ್ಧಿ ಹೆಚ್ಚುವರಿ ಕಾಮಗಾರಿಯನ್ನು ಕೈಗೊಳ್ಳಲು ಅಂದಾಜು ಮೊತ್ತ ರೂ. 150.00 ಲಕ್ಷಗಳ (ರೂಪಾಯಿ ಒಂದುನೂರ ಐವತ್ತು ಲಕ್ಷಗಳು ಮಾತ್ರ) ಅಂದಾಜು ಪಟ್ಟಿಗೆ ಈ ಕೆಳಕಂಡ ಷರತ್ತುಗಳೊಳಪಟ್ಟಂತೆ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

1) ಈ ಕಾಮಗಾರಿಯನ್ನು ರೂ.150.00 ಲಕ್ಷಗಳ ಮಿತಿಯಲ್ಲಿಯೇ ಯಾವುದೇ ಹೆಚ್ಚುವರಿಯಾಗದಂತೆ ಅನುಷ್ಠಾನಗೊಳಿಸತಕ್ಕದ್ದು.

2) ಈ ಕಾಮಗಾರಿಯ ಅಂದಾಜು ಪಟ್ಟಿಗೆ ಸಕ್ಷಮ ತಾಂತ್ರಿಕ ಪ್ರಾಧಿಕಾರದಿಂದ ತಾಂತ್ರಿಕ ಮಂಜೂರಾತಿಯನ್ನು ಪಡೆದುಕೊಂಡು, ನಂತರ ಟೆಂಡರ್ ಕರೆಯಲು ಕ್ರಮ ವಹಿಸತಕ್ಕದ್ದು.

3) ಈ ಕಾಮಗಾರಿಯ ಟೆಂಡರ್ ಪ್ರಕ್ರಿಯೆಗಳನ್ನು ಕೆ.ಟಿ.ಪಿ.ಪಿ ಕಾಯ್ದೆ 1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು 2000 ಹಾಗೂ E-proc portal ಮುಖಾಂತರ ಕೈಗೊಂಡು ಟೆಂಡರ್‌ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು, ನಂತರ ಮುಂದಿನ ಕ್ರಮ ವಹಿಸತಕ್ಕದ್ದು.

4) ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರರವರು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಗಳನ್ವಯ ಸರ್ಕಾರದ ಅನುಮೋದನೆ ಪಡೆದುಕೊಳ್ಳುವುದು.

5) ಈ ಯೋಜನೆಗೆ ಸಂಬಂಧಪಟ್ಟಂತೆ ಯೋಜನೆಗಳು ಜಾರಿ ಇರುವ ಪೂರ್ಣಾವಧಿಯಲ್ಲಿ ಗುಣಮಟ್ಟ ಹಾಗೂ ಪ್ರಮಾಣಗಳ ತಪಾಸಣೆಗಾಗಿ Third Party Consultants ಅನ್ನು ನೇಮಿಸಿಕೊಳ್ಳುವುದು.

6) ಯೋಜನೆಯಲ್ಲಿ ಯಾವುದೇ ಬದಲಾವಣೆ ಮಾಡಬೇಕಾದಲ್ಲಿ ಸರ್ಕಾರದ ಗಮನಕ್ಕೆ ತಂದು ಅಂತಹ ಬದಲಾವಣೆಗಳನ್ನು ನಿರ್ವಹಿಸುವ ಮುನ್ನ ಸರ್ಕಾರದ ಅನುಮೋದನೆ ಪಡೆದುಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿ.ಎಫ್.ಪಿ 2008 ದಿನಾಂಕ: 16–05–2008ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 133

ವಿ.ರಾಜೇಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.